(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:249/2012-13 ದಿನಾಂಕ:19.07.2016.

ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ
ಸಹಾಯಕ ಆಯುಕ್ತರು, ಹೊಸಪೇಟೆ.

* * * * *

**ವಾದಿಗಳು: ಶ್ರೀ/ ಶ್ರೀಮತಿ**

1] ನರೇಗಲ್ ಬಸವರಾಜ ತಂದೆ
ಲೇಟ್ ನರೇಗಲ್ ಮಲ್ಲಪ್ಪ,
ವಾಸ: ಮಾಲವಿ ಗ್ರಾಮ, ಹಗರಿಬೊಮ್ಮನಹಳ್ಳಿ
ತಾಲೂಕು, ಬಳ್ಳಾರಿ ಜಿಲ್ಲೆ.

[ಶ್ರೀ ಕೆ.ಸಿ.ಶರಣಪ್ಪ, ವಕೀಲರು, ಹೊಸಪೇಟೆ]

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ಜ್ಯೋತಿ ರತ್ನಮ್ಮ ಗಂಡ ಮಲ್ಲಿಕಾರ್ಜುನ
ತಂದೆ ಜ್ಯೋತಿ ರುದ್ರಪ್ಪ,
ವಾಸ: ಮಾಲವಿ ಗ್ರಾಮ, ಹಗರಿಬೊಮ್ಮನಹಳ್ಳಿ
ತಾಲೂಕು, ಬಳ್ಳಾರಿ ಜಿಲ್ಲೆ.

2] ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ.

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಗರಿಬೊಮ್ಮನಹಳ್ಳಿ | ಕೋಗಳಿ | ಮಾಲವಿ | 166/ಸಿ ಪೈಕಿ | 00 ಎಕರೆ 14 ಸೆಂಟ್ಸ್ |

**ಪೀಠಿಕೆ:-**

ಹಗರಿಬೊಮ್ಮನಹಳ್ಳಿ ತಾಲೂಕು ಕೋಗಳಿ ಹೋಬಳಿ ಮಾಲವಿ ಗ್ರಾಮದ ಸ.ನಂ.166/ಸಿ ಪೈಕಿ ವಿಸ್ತೀರ್ಣ:00 ಎಕರೆ 14 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೋಗಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:STR/09/1977-78 ದಿನಾಂಕ:28.01.1978 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:23.01.2013 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:30.04.2013 ಕ್ಕೆ ನಿಗಧಿಪಡಿಸಿ ಉಭಯ ಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

**ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.**

1. ಸದರಿ ವ್ಯಾಜ್ಯದ ಜಮೀನನ್ನು ನರೇಗಲ್ಲು ಮಲ್ಲಪ್ಪನವರ 2ನೇ ಮಗ ಮೈನರು **ಬಸವರಾಜ್** ನಿಗೇವಾನಿ ಜನಕ ತಂದೆ ನರೇಗಲ್ಲು ವೀರಪ್ಪನ ಮಗ **ಮಲ್ಲಪ್ಪ** ಇವರಿಗೆ ಬಸಪ್ಪನ ಮಗ **ರುದ್ರಪ್ಪ** ಇವರು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:436/1976-77 ದಿನಾಂಕ:04.10.1976 ರ ಮೂಲಕ ರೂ.500/- ಗಳಿಗೆ ಕ್ರಯಕ್ಕೆ ನೀಡಿರುವುದು ಕ್ರಯ ಪತ್ರದ ಪ್ರತಿ ಹಾಗೂ ಇ.ಸಿ.(ನಮೂನೆ-15) ಪ್ರತಿಯಿಂದ ಕಂಡುಬಂದಿರುತ್ತದೆ.
2. ಕ್ರಯಕ್ಕೆ ಪಡೆದ ದಿನದಿಂದಲೂ ವಾದಿಯ ತಂದೆಯಾದ **ಮಲ್ಲಪ್ಪ** ಇವರೇ ಸದರಿ ಜಮೀನಿನ ಹಕ್ಕು ಹಾಗೂ ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ಇವರ ಮರಣಾನಂತರ ವಾದಿಯು ಯಾವುದೇ ಅಡಚಣೆಯಿಲ್ಲದೇ ಸದರಿ ಜಮೀನಿನ ಹಕ್ಕು ಹಾಗೂ ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ಪ್ರತಿವಾದಿ-1 ರವರಿಗೆ ಸದರಿ ಜಮೀನಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲವೆಂದು, ಆದರೆ, ಕ್ರಯಕ್ಕೆ ಪಡೆದ ದಿನದಿಂದಲೂ ಈ ವರೆಗೂ ವಾದಿಗಳ ಹೆಸರು ಪಹಣಿಯಲ್ಲಿ ನಮೂದಾಗಿರುವುದಿಲ್ಲ ಎಂದು ವಾದಿಪರ ವಕೀಲರು ತಿಳಿಸಿರುತ್ತಾರೆ.

3. ವಾದಿಗಳು ಸಲ್ಲಿಸಿದ 1978-79 ರಿಂದ 1982-83 ರವರೆಗಿನ ಪಹಣಿ ಪತ್ರಿಕೆಯಲ್ಲಿ ಜ್ಯೋತಿ ರುದ್ರಪ್ಪ ಇವರ ಹೆಸರು ನಮೂದು ಇದ್ದು, 1983-84 ರಿಂದ 2000-01 ರವರೆಗಿನ ಪಹಣಿ ಪತ್ರಿಕೆಯಲ್ಲಿ ಗಾಣಿಗರ ಲಲಿತಮ್ಮ ಗಂಡ ರುದ್ರಪ್ಪ ಮಾಲವಿ ಇವರ ಹೆಸರು ಎಂ.ನಂ.1/83-84 ದಿನಾಂಕ:14.12.83 ರಲ್ಲಿ ಪೋತಿ ವಾರಸು ಪ್ರಕಾರ ನಮೂದು ಆಗಿರುವುದು ಕಂಡುಬಂದಿರುತ್ತದೆ. 2001-02 ರಿಂದ ಚಾಲ್ತಿಯ ಪಹಣಿಯವರೆಗೂ ನಾಗರತ್ನಮ್ಮ ತಂದೆ ರುದ್ರಪ್ಪ ಇವರ ಹೆಸರು ಎಂ.ನಂ.46/2001-02 ಪಿತ್ರಾರ್ಜಿತ ದಿನಾಂಕ:15.04.2002 ರ ಪ್ರಕಾರ ಪಹಣಿ ಪತ್ರಿಕೆಯ ಕಾಲಂ 9 ರಲ್ಲಿ ನಮೂದು ಇರುವುದು ಕಂಡು ಬಂದಿರುತ್ತದೆ.
4. ಪ್ರಶ್ನಿತ ಹಕ್ಕು ಬದಲಾವಣೆ ಆದೇಶ ಸಂಖ್ಯೆ:STR/09/1977-78 ದಿನಾಂಕ:28.01.1978 ವನ್ನು ಪರಿಶೀಲಿಸಲಾಗಿ ಸದರಿ ಆದೇಶದಲ್ಲಿ ROR ನಲ್ಲಿ ಪಟ್ಟಾದಾರರ ಹೆಸರು ಜ್ಯೋತಿ ರುದ್ರಪ್ಪ ತಮದೆ ಬಸಪ್ಪನದು ಇದೆ. 'ಜೆ' ಫಾರಂನಲ್ಲಿ ಗಾಣಿಗರ ಬಸಪ್ಪನ ಮಗ ರುದ್ರಪ್ಪನೆಂದು ಇರುವುದರಿಂದ ಗೈರು ಮಂಜೂರು ಎಂದು ನಮೂದು ಇರುವುದು ಕಂಡುಬಂದಿರುತ್ತದೆ. ಸದರಿ ಹಕ್ಕು ಬದಲಾವಣೆ ತಿರಸ್ಕೃತಗೊಂಡಿದ್ದು, ಸದರಿ ಆದೇಶದಿಂದ ಬಾಧಿತಗೊಂಡ ವಾದಿಯು ತಮ್ಮ ಹೆಸರಿಗೆ ನೋಂದಾಯಿತ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹಗರಿಬೊಮ್ಮನಹಳ್ಳಿ ತಾಲೂಕು ಕೋಗಳಿ ಹೋಬಳಿ ಮಾಲವಿ ಗ್ರಾಮದ ಸ.ನಂ.166/ಸಿ ಪೈಕಿ ವಿಸ್ತೀರ್ಣ:00 ಎಕರೆ 14 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೋಗಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:STR/09/1977-78 ದಿನಾಂಕ:28.01.1978 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನನ್ನು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:436/1976-77 ದಿನಾಂಕ:04.10.1976 ರ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹಗರಿಬೊಮ್ಮನಹಳ್ಳಿ ತಾಲೂಕು ಕೋಗಳಿ ಹೋಬಳಿ ಮಾಲವಿ ಗ್ರಾಮದ ಸ.ನಂ.166/ಸಿ ಪೈಕಿ ವಿಸ್ತೀರ್ಣ:00 ಎಕರೆ 14 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೋಗಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:STR/09/1977-78 ದಿನಾಂಕ:28.01.1978 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನನ್ನು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:436/1976-77 ದಿನಾಂಕ:04.10.1976 ರ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡ್ಡಿಸಿ, ಈ ದಿನ ದಿನಾಂಕ:19.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಡಾ. ಅವಿನಾಶ್ ಮೆನನ್‌ರಾಜೇಂದ್ರನ್, ಭಾ.ಆ.ಸೇ ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ
**ಪ್ರತಿಯನ್ನು**:- ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.